ಅನಂತರ ಆ ಭಕ್ತರು ಹೊರಟುಹೋದ ಮೇಲೆ ನಮ್ಮ ಕಡೆಗೆ ತಿರುಗಿ ಸ್ವಾಮೀಜಿ ಹೀಗೆ ಹೇಳಿದರು: 'ನನಗೆ ನಾನೇ ಕಪಾಳಕ್ಕೆ ಹೊಡೆದುಕೊಳ್ಳಬೇಕೆನ್ನಿಸುತ್ತದೆ.' ಏಕೆಂದರೆ ಆ ಭಕ್ತರ ಭಾಷೆಯ ಜ್ಞಾನ ತಮಗಿಲ್ಲವಲ್ಲ ಎಂದು ಸ್ವಾಮೀಜಿ ತುಂಬ ನೊಂದು ಕೊಂಡಿದ್ದರು. ಅದೆಂತಹ ಹೃದಯವೈಶಾಲ್ಯ ಅವರದ್ದು!"

ಸ್ವಾಮೀಜಿಯವರಿಗೆ ಹೆಚ್ಚು ಶ್ರಮವಾಗಬಾರದು, ಆರೋಗ್ಯ ಸ್ಥಿತಿಯನ್ನು ಯೋಗ್ಯರೀತಿಯಲ್ಲಿ ಕಾಪಾಡಿಕೊಳ್ಳಬೇಕು ಎಂದು ಅವರ ಸೇವಕವೃಂದ ಸದಾ ಜಾಗರೂಕವಾಗಿರುತ್ತಿತ್ತು. ಸ್ವಾಮೀಜಿಯವರನ್ನು ಭೇಟಿಮಾಡುವ ಸಮಯವನ್ನು ನಿಗದಿಪಡಿಸುವುದೂ ಆ ವಿಧಾನ ಗಳಲ್ಲಿ ಒಂದು. ಸ್ವಾಮೀಜಿಯವರಿಗೆ ತಮ್ಮ ಆರೋಗ್ಯದ ಪರಿಸ್ಥಿತಿಯ ಬಗ್ಗೆ ಚೆನ್ನಾಗಿ ಅರಿವಿದ್ದರೂ, ನೋಡಲು ಬರುವ ಭಕ್ತರಿಂದ ದೂರವಿರಲು ಸಾಧ್ಯವಾಗುತ್ತಿರಲಿಲ್ಲ. ಕೊಲ್ಕತಾದಿಂದ ಒಬ್ಬ ಶಾಲಾ ಅಧ್ಯಾಪಕಿ ಪ್ರತಿದಿನ ಸ್ವಾಮೀಜಿಯವರನ್ನು ಕಾಣಲು ಬರುತ್ತಿದ್ದರು. ಚಳಿಗಾಲದಲ್ಲಿ ಶಾಲೆಯಿಂದ ಹೊರಟು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ದರ್ಶನಕ್ಕೆ ಬರುವುದಕ್ಕೆ ಆಗುತ್ತಿರಲಿಲ್ಲ (ಚಳಿಗಾಲದಲ್ಲಿ ದರ್ಶನದ ಅವಧಿಯನ್ನು ಮುಂಚೆಯೇ ಇಟ್ಟಿರುತ್ತಾರೆ). ಆದರೆ ಸ್ವಾಮೀಜಿಯವರು ತಮ್ಮ ದರ್ಶನಕ್ಕೆ ಬರುವ ಆ ಭಕ್ತ ಮಹಿಳೆಗೆ ವಿಶೇಷ ಅವಕಾಶವನ್ನು ಕಲ್ಪಿಸುವಂತೆ ಸೇವಕರಿಗೆ ಹೇಳಿದ್ದರು. "ನೋಡಿ, ಅವರು ಎಷ್ಟು ದೂರದಿಂದ ಕಷ್ಟಪಟ್ಟು ಧಾವಿಸಿ ಬರುತ್ತಾರೆ. ನೀವು 'ಇಲ್ಲ' ಎನ್ನಬೇಡಿ" ಎಂದು ತಾಕೀತು ಮಾಡಿದ್ದರು. "ಈ ಮಾತುಗಳನ್ನು ಅವರು ಎಷ್ಟು ಮೃದುವಾಗಿ ಹೇಳಿದರೆಂದರೆ, ಕರುಣೆಯ ಪ್ರವಾಹವೇ ಅವರ ಮೂಲಕ ಹರಿಯುತ್ತಿದೆಯೇನೋ ಎಂಬಂತೆ ನಮಗೆ ಅನ್ನಿಸಿತು. ಸ್ವಾಮೀಜಿಯವರಲ್ಲಿ ಅಡಗಿದ್ದ ಮಧುರ ಭಾವನೆಗಳು ಉಕ್ಕಿ ಹರಿದು ಬಂದಂತೆ ನಮಗೆ ಗೋಚರವಾಯಿತು" ಎಂದು ಅವರ ಸೇವಕರೊಬ್ಬರು ಸ್ಮರಿಸಿಕೊಳ್ಳುತ್ತಾರೆ.

ಇದಲ್ಲದೆ, ಯಾರಾದರೂ ಭಕ್ತರು ಕೆಲವು ದಿನಗಳ ಕಾಲ ಬಾರದಿದ್ದರೆ, ಅವರ ಬಗ್ಗೆ ವಿಚಾರಿಸಿ ತಮಗೆ ತಿಳಿಸುವಂತೆ, ಬೇರೆ ಯಾರಾದರೂ ಭಕ್ತರಿಗೆ ಸ್ವಾಮೀಜಿ ಹೇಳುತ್ತಿದ್ದರು. ಹಾಗೆಯೇ ಅವರ ಆರೋಗ್ಯದ ಬಗ್ಗೆ ವಿಚಾರಿಸಲೂ ತಿಳಿಸುತ್ತಿದ್ದರು. ಮಹಾಪುರುಷರ ಪ್ರಮುಖವಾದ ಲಕ್ಷಣವು ಕಾರುಣ್ಯಭಾವವೆಂದು ಶಾಸ್ತ್ರಗಳು ಹೇಳುತ್ತವೆ. ತಮ್ಮ ಆಧ್ಯಾತ್ಮಿಕ ಸಂಪತ್ತನ್ನು ಎಲ್ಲರಿಗೂ ವಿತರಿಸಲು ಅಂಥವರು ಕಾತರರಾಗಿರುತ್ತಾರೆ. ಅವರ ಬಳಿಗೆ ಬಂದವರಿಗೆ ಎಂದೂ 'ಇಲ್ಲ' ಎನ್ನುವ ಮಾತೇ ಅವರಲ್ಲಿ ಇರುವುದಿಲ್ಲ. ಇಂಥ ಮಹಾಪುರುಷರ ಸಾಲಿಗೆ ಸ್ವಾಮಿ ಭೂತೇಶಾನಂದಜಿ ಕೂಡ ಸೇರುತ್ತಾರೆ.

ಅಲ್ಲದೆ, ಸ್ವಾಮೀಜಿಯವರು ಔದಾರ್ಯವೇ ಮೂರ್ತಿವೆತ್ತಂತೆ ಇದ್ದರು. ನಿಗದಿತ ವೇಳೆಯಲ್ಲದೆ, ಬೇರೆ ಸಮಯದಲ್ಲಿ ಕಾಗದಪತ್ರಗಳಿಗೆ ಸಹಿ ಹಾಕಿಸಿಕೊಳ್ಳಲು ಹೋದರೂ ನಗುಮುಖದಿಂದಲೇ ಸಹಿ ಹಾಕುತ್ತಿದ್ದರು; ಬೇಜಾರು ಮಾಡಿಕೊಳ್ಳುತ್ತಿರಲಿಲ್ಲ. ಯಾರಾದರೂ ಭಕ್ತರು, ತಾವು ಕೊಂಡ ಪುಸ್ತಕದಲ್ಲಿ ಆಶೀರ್ವಾದಪೂರ್ವಕವಾಗಿ ಸಹಿ ಮಾಡಬೇಕೆಂದು ಬಯಸಿದರೆ, ತಕ್ಷಣವೇ ಸಹಿಹಾಕಿ ಕೊಡುತ್ತಿದ್ದರು. "ನಂತರ ಬಾ. ಈಗ ಆಗುವುದಿಲ್ಲ" ಎಂಬ ಮಾತುಗಳನ್ನು ಅವರು ಎಂದೂ ಹೇಳಿದವರಲ್ಲ. ತಮಗೆ ಎಂಥ ಅಸೌಕರ್ಯವಾದರೂ ಸರಿಯೇ, ಬೇರೆಯವರ ಸಲುವಾಗಿ ತೊಂದರೆಯನ್ನು ತೆಗೆದುಕೊಳ್ಳುವುದಕ್ಕೆ ಸ್ವಾಮೀಜಿಯವರು ಒಂದು ಕ್ಷಣವೂ ಹಿಂದುಮುಂದು ನೋಡುತ್ತಿರಲಿಲ್ಲ. ಇತರರಿಗಾಗಿ ಇಷ್ಟೊಂದು ಶ್ರಮಪಡುವುದನ್ನು ಸೇವಕರು ಆಕ್ಷೇಪಿಸಿದರೆ ಅದಕ್ಕೆ ಅವರು ಹೀಗೆ ಹೇಳುತ್ತಿದ್ದರು:

"ಶರೀರವಿರುವವರೆಗೂ ಬೇರೆಯವರ ಸಲುವಾಗಿ ಏನಾದರೂ ಮಾಡುತ್ತಿರಬೇಕು. ಸುಮ್ಮನೇ ಬದುಕಿರುವುದರಿಂದ ಏನು ತಾನೇ ಪ್ರಯೋಜನ?"

"ಮಠದ ಕೆಲಸಗಳನ್ನು ಮಾಡದೆ, ಕುಳಿತಲ್ಲೇ ಕುಳಿತು ನಾಲ್ಕೂ ಹೊತ್ತು ಊಟಮಾಡುವುದು ಸರಿಯೇ?"

"(ಭಕ್ತರ) ಪ್ರಣಾಮವನ್ನು ನಿಲ್ಲಿಸಿದ ಮಾತ್ರಕ್ಕೆ ಈ ಶರೀರ ಉಳಿಯುತ್ತದೆಯೇನು? ನೋಡು, ಈ ಶರೀರ ಸಂಘದ ಕೆಲಸಕ್ಕೆ ಅರ್ಪಿತವಾಗಿದೆಯೇ ಹೊರತು ಸುಖಪಡುವುದಕ್ಕಲ್ಲ."

ಒಮ್ಮೆ ಸ್ವಾಮೀಜಿಯವರನ್ನು ಒಬ್ಬ ಭಕ್ತರು ಹೀಗೆ ಪ್ರಶ್ನಿಸಿದರು: "ಸ್ವಾಮೀಜಿ, ನೀವು ಯಾವ ಮಂತ್ರವನ್ನು ಬಹಳವಾಗಿ ಇಷ್ಟಪಡುತ್ತೀರಿ?" ಉತ್ತರವಾಗಿ ಸ್ವಾಮೀಜಿ ಈ ಮಂತ್ರವನ್ನು ಹೇಳಿದರು:

**ಆತ್ಮಾನಂ ಚೇತ್ ವಿಜಾನೀಯಾತ್ ಅಯಮಸ್ಮೀತಿ ಪೂರುಷಃ**
**ಕಿಮಿಚ್ಛನ್ ಕಸ್ಯ ಕಾಮಾಯ ಶರೀರಮನುಸಂಜ್ವರೇತ್**

"ಪುರುಷನು ಪರಮಾತ್ಮನನ್ನು 'ಅವನೇ ನಾನು' ಎಂದು ಅರಿತುಕೊಂಡರೆ, ಯಾವುದನ್ನು ತಾನೇ ಬಯಸುತ್ತ, ಯಾವ ಪ್ರಯೋಜನಕ್ಕಾಗಿ ತಾನೇ ಶರೀರವನ್ನು ಅನುಸರಿಸುತ್ತ, ದುಃಖಿಸುವನು?" (*ಬೃಹದಾರಣ್ಯಕ ಉಪನಿಷತ್, ೪.೪.೧೨*) ಈ ಮಂತ್ರದಲ್ಲಿ ಹೇಳಿರುವ ಭಾವನೆಯ ಪ್ರತಿರೂಪರಾಗಿ ಸ್ವಾಮಿ ಭೂತೇಶಾನಂದಜಿ ಬಾಳಿದರು ಎಂದು ಅನ್ನಿಸುವುದಿಲ್ಲವೇ?

ಸುಶ್ಮಾ ಸೇನ್ ಎಂಬ ಭಕ್ತ ಮಹಿಳೆ ತಮ್ಮ ನೆನಪುಗಳನ್ನು ಹೀಗೆ ಬರೆಯುತ್ತಾರೆ: "ಒಮ್ಮೆ ಸ್ವಾಮೀಜಿಯವರು ಬ್ರಹ್ಮನ 'ತಟಸ್ಥ' ಲಕ್ಷಣವನ್ನು ವಿವರಿಸುತ್ತ, ಈ ಉದಾಹರಣೆಯನ್ನು ನೀಡಿದರು: 'ನದಿಯ ದಂಡೆ ಸ್ಥಿರವಾಗಿರುತ್ತದೆ. ನದಿಯ ನೀರು ಹರಿಯುತ್ತಿರುತ್ತದೆ. ದಡ ತಟಸ್ಥ.' ಇದನ್ನು ಹೇಳಿ ಕೆಲವು ದಿನಗಳಲ್ಲಿಯೇ ಒಂದು ಉತ್ಸವದ ದಿನದಂದು ಅವಿರತವಾಗಿ ಭಕ್ತರು ಅವರಿಗೆ ಪ್ರಣಾಮವನ್ನು ಸಲ್ಲಿಸಲು ಬರುತ್ತಲೇ ಇದ್ದರು. ಸ್ವಾಮೀಜಿ ಮಾತ್ರ ಸ್ಥಿರವಾಗಿ ಕುಳಿತಿದ್ದರು. ಆಗ ನಾನು ಹೇಳಿದೆ, 'ಬಾಬಾ, ನೀವು ತಟಸ್ಥರಾಗಿ ಕುಳಿತಿದ್ದೀರಿ. ನಿಮ್ಮ ಮುಂದೆ ಭಕ್ತರ ನದಿ ಹರಿದುಹೋಗುತ್ತಿದೆ' ಎಂದು. ಅದಕ್ಕೆ ಸ್ವಾಮೀಜಿಯವರು ಹೀಗೆ ಉತ್ತರಿಸಿದರು: 'ಇಲ್ಲ ತಾಯಿ, ನಾನಿನ್ನೂ ತಟಸ್ಥನಾಗಿಲ್ಲ. ನಿಮ್ಮೆಲ್ಲರ ಆ ನಗುಮುಖಗಳನ್ನು ನೋಡುತ್ತ, ಆನಂದಪಡುತ್ತೇನೆ; ಜೋಲುಮೋರೆಗಳನ್ನು ಕಂಡರೆ ಕುಗ್ಗುತ್ತೇನೆ.' ಅಂದಿನಿಂದ ನಾನು ನಿರ್ಧರಿಸಿದೆ, 'ಎಷ್ಟೇ ದುಃಖವಾಗಲಿ, ಸ್ವಾಮೀಜಿಯವರ ಎದುರು ನಾನು ಯಾವಾಗಲೂ ಹಸನ್ಮುಖಿಯಾಗಿಯೇ ಇರುತ್ತೇನೆ' ಎಂದು. ಅದನ್ನು ಅಭ್ಯಾಸ ಮಾಡುತ್ತ ಬಂದಿದ್ದೇನೆ. ಅದೇ ಈಗ ನನಗೆ ದುಃಖಗಳನ್ನು ಮೆಟ್ಟಿ ನಿಲ್ಲಬಲ್ಲ ಶಕ್ತಿಯನ್ನು ತಂದುಕೊಟ್ಟಿದೆ.